# ಸಮಾನತೆಯ ಹರಿಕಾರ

(ಶ್ರೀ ಎನ್.ರಾಚಯ್ಯ ಶತಮಾನೋತ್ಸವ (1920-2020) ಸ್ಮರಣ ಸಂಚಿಕೆ)



ಶ್ರೀ ಎನ್. ರಾಚಯ್ಯ ಅಧ್ಯಯನ ಪೀಠ
ರಾಜ್ಯಶಾಸ್ತ್ರ ಅಧ್ಯಯನ ವಿಭಾಗ, ಮೈಸೂರು ವಿಶ್ವವಿದ್ಯಾನಿಲಯ
ಮಾನಸಗಂಗೋತ್ರಿ, ಮೈಸೂರು-೦೬.

Scanned with CamScanner

# SAMANATEYA HARIKARA

(Sri. N. Rachaiah Centenary (1920-2020) Souvenir)

*Collected by :*

**Editorial Board**

Published by :

**GAYATHRI ENTERPRISES**

#285/F-6, 5th West Cross,
Uttaradhimutt Road, Mysuru.

ISBN No : 978-93-89877-16-8

| | | |
|---|---|---|
| Pages | : | IV + 304 = 308 |
| First Edition | : | 2020 |
| Copy Right | : | Reserved |
| Copies | : | 1000 copies |
| Price | : | 300/- |
| ಪುಟಗಳು | : | IV + 304 = 308 |
| ಮೊದಲ ಮುದ್ರಣ | : | 2020 |
| © | : | ಕಾಯ್ದಿರಿಸಲಾಗಿದೆ |
| ಪ್ರತಿಗಳು | : | 1000 |
| ಬೆಲೆ | : | ರೂ.300/- |
| ಮುಖಪುಟ ವಿನ್ಯಾಸ | : | ಹೇಮಂತ್ ರಾಜ್ |
| ಅಕ್ಷರ ಜೋಡಣೆ | : | ಗಜೇಂದ್ರ ಪಿ |
| ಮುದ್ರಣ | : | ಗಾಯತ್ರಿ ಪ್ರಿಂಟ್ಸ್, ಮೈಸೂರು |


Scanned with CamScanner

# ಮೂಲ ಲೇಖಕರ ಲೇಖನಗಳು

1. ಚಿಂತನಶೀಲ, ಸಿಂಹವಾಣಿ, ಅಸ್ಪೃಶ್ಯರ ಧೀಮಂತ ನಾಯಕ ದಕ್ಷ ಆಡಳಿತಗಾರ, ಸಮಾಜ ಸುಧಾರಕ, ದಲಿತೋದ್ಧಾರಕ ದಿ.ಎನ್.ರಾಚಯ್ಯನವರು 73
– ಶ್ರೀ ಮ.ಸಿ.ನಾರಾಯಣ

2. ದಲಿತ ರಾಜಕಾರಣ ಅಂದು–ಇಂದು: ಎನ್.ರಾಚಯ್ಯ ಒಂದು ನೆನಪು 84
– ಪ್ರೊ.ಜಿ.ಸೋಮಶೇಖರ್

3. ಜಗಜೀವನ್ ರಾಮ್ ಹಾಗೂ ಎನ್.ರಾಚಯ್ಯ ಅವರ ಸಂಬಂಧ 91
– ಡಾ.ಕೆ.ಸದಾಶಿವ

4. ಅಸ್ಪೃಶ್ಯರ ಶೈಕ್ಷಣಿಕ ಬದುಕಿನ ಹರಿಕಾರ 101
– ಪ್ರೊ.ಹೆಚ್.ಬಿ.ಮಲ್ಲಿಕಾರ್ಜುನಸ್ವಾಮಿ

5. ಎನ್.ರಾಚಯ್ಯ ಜೀವನ–ಕೊಡುಗೆಗಳು 109
– ಪ್ರೊ.ಜಿ.ಟಿ.ರಾಮಚಂದ್ರಪ್ಪ

6. ಧೈರ್ಯಶಾಲಿ ಧೀಮಂತ ರಾಜಕಾರಣಿ 118
– ಶ್ರೀ ಬಿ.ಸೋಮಶೇಖರ್

7. ತ್ರಿವೇಣಿ ಸಂಗಮ ಈಜಿ ದೆಹಲಿಯ ಪಾರ್ಲಿಮೆಂಟ್ ದಡ ಸೇರಿದ ಎನ್.ರಾಚಯ್ಯ 126
– ಪ್ರೊ.ಎನ್.ಕೆ.ಲೋಲಾಕ್ಷಿ

8. ನಾ ಕಂಡಂತೆ ಎನ್.ರಾಚಯ್ಯ 130
– ಆರ್.ಲೋಕೇಶ್

9. ಅಂಗ ವಿಶ್ವಾಸಿಗರ ಕ್ಷೇಮಧ್ವನಿ ಎನ್.ರಾಚಯ್ಯ 137
– ಪ್ರೊ.ಕೃಷ್ಣ ಹೊಂಬಳ್

10. ಅಜಾತ ಶತ್ರು 149
– ಡಾ.ಡಿ.ತಿಮ್ಮಯ್ಯ

11. ಅಪೂರ್ವ ವ್ಯಕ್ತಿತ್ವ 154
– ಡಾ.ಭಾರತಿ ಶಂಕರ್ ಎನ್.ಎಲ್.

12. ದಲಿತ ಕಲ್ಯಾಣದ ಹರಿಕಾರ 159
– ಶ್ರೀ ಹರೀಶ್‌ಕುಮಾರ್



Scanned with CamScanner

# ದಲಿತ ರಾಜಕಾರಣ ಅಂದು-ಇಂದು : ಎನ್. ರಾಚಯ್ಯ ಒಂದು ನೆನಪು

**ಪ್ರೊ.ಜಿ. ಸೋಮಶೇಖರ್**

ಕರ್ನಾಟಕ ರಾಜ್ಯ ರಾಜಕಾರಣದ ಚರಿತ್ರೆಯಲ್ಲಿ ದಲಿತ ರಾಜಕಾರಣವನ್ನು ಕುರಿತು ಮಾತನಾಡುವುದಾದರೆ; ಕೆಲವು ರಾಜಕಾರಣಿಗಳು ಮುಖ್ಯರಾಗುತ್ತಾರೆ. ಅವರುಗಳಲ್ಲಿ ಬಿ.ಬಸವಲಿಂಗಪ್ಪ ಮತ್ತು ಎನ್.ರಾಚಯ್ಯ ಅವರು ಅಗ್ರ ಪಂಕ್ತಿಯಲ್ಲಿ ನಿಲ್ಲುತ್ತಾರೆ. ಇವರಿಬ್ಬರೂ ದಲಿತ ರಾಜಕಾರಣದ ಮೇರುವ್ಯಕ್ತಿತ್ವದ ಗಟ್ಟಿಧ್ವನಿಯಾಗಿ ಹೊರಹೊಮ್ಮಿದ್ದು ಚಾರಿತ್ರಿಕವಾಗಿದೆ. ಎನ್.ರಾಚಯ್ಯ ಅವರು ಸರ್ಕಾರಿ ನೌಕರಿಯನ್ನು ತ್ಯಜಿಸಿ, ರಾಜಕಾರಣದಲ್ಲಿ ವಿಶೇಷವಾಗಿ ನೆಲೆ ನಿಂತವರು. ಶಿಕ್ಷಣದ ಹಿನ್ನೆಲೆ ಇಲ್ಲದ ಕುಟುಂಬದಿಂದ ಬಂದು ಶಿಕ್ಷಣಕ್ಕೆ ತಮ್ಮ ವಿದ್ಯಾರ್ಥಿದೆಸೆಯಿಂದಲೂ ಹೆಚ್ಚಿನ ಮಹತ್ವವನ್ನು ನೀಡಿದವರು. ಇವರು ಮೈಸೂರು ನಗರದಲ್ಲಿ ದಲಿತ ವಿದ್ಯಾರ್ಥಿಗಳಿಗಾಗಿ ಪ್ರತ್ಯೇಕವಾದ ವಿದ್ಯಾರ್ಥಿ ನಿಲಯವೊಂದನ್ನು ಸ್ಥಾಪಿಸುವ ಮೂಲಕ ಗ್ರಾಮೀಣ ಪ್ರದೇಶದ ಮಕ್ಕಳು ಕೂಡ ನಗರ ಪ್ರದೇಶದಲ್ಲಿ ಶಿಕ್ಷಣವನ್ನು ಪಡೆಯುವಂತೆ ಮಾಡಿದವರು. ತಮ್ಮ ಜನಸಮುದಾಯದ ಸಂಘಟನೆಗೆ ಆದ್ಯತೆಯನ್ನು ನೀಡುವ ಮೂಲಕ ಅದರ ನೇತೃತ್ವವನ್ನು ಸ್ವತಃ ತಾವೇ ವಹಿಸಿಕೊಂಡು ಅರಿವನ್ನು ಉಂಟುಮಾಡುತ್ತಿದ್ದರು. ಮೈಸೂರು ಆದಿಜಾಂಬವ ಸಂಘದ ಸಂಸ್ಥಾಪಕ ಅಧ್ಯಕ್ಷರಾಗಿ, ಕರ್ನಾಟಕ ರಾಜ್ಯದ ಹರಿಜನ್ ವಿದ್ಯಾರ್ಥಿಗಳ ಸಂಘಟನೆಯ ಅಧ್ಯಕ್ಷರಾಗಿ ಕಾರ್ಯವನ್ನು ನಿರ್ವಹಿಸಿದವರು.ರಾಜಕಾರಣದ ಪ್ರವೇಶ ಮತ್ತು ಬದುಕು ಸ್ಥಳೀಯ ಸರ್ಕಾರದಿಂದ ಪ್ರಾರಂಭವಾಯಿತು. ಭಾರತದ ಮೊದಲನೆಯ ಲೋಕಸಭೆಗೆ ಮೈಸೂರು ದ್ವಿಸದಸ್ಯ ಕ್ಷೇತ್ರದಿಂದ ಆಯ್ಕೆಗೊಂಡು ಸಂಸತ್ತಿನ ಸದಸ್ಯರಾಗಿ, ವಿದೇಶಾಂಗ ವ್ಯವಹಾರಗಳ ಸಮಿತಿಯ ಸದಸ್ಯರಾಗಿ ಮತ್ತು ಅಂದಾಜು ಸಮಿತಿಗಳಲ್ಲಿ ಸೇವೆಯನ್ನು ಸಲ್ಲಿಸಿರುತ್ತಾರೆ.



Scanned with CamScanner